
# ಕಥೋಪದೇಶ

## ಪರೋಪಕಾರಾರ್ಥಂ ಇದಂ ಶರೀರಮ್

**ಇದು** ಸುಮಾರು ೫೫ ವರ್ಷಗಳ ಹಿಂದಿನ ಮಾತು. ಹಳೆಯದಾದರೂ ನನ್ನ ಮನಸ್ಸಿನ ಮೇಲೆ ಎಂದೂ ಮರೆಯಲಾರದಂತೆ ಅಚ್ಚೊತ್ತಿದ ಘಟನೆ.

ಆಗ ನಾವು ನವಲಗುಂದದಲ್ಲಿ ಬಾಡಿಗೆ ಮನೆಯಲ್ಲಿ ಇದ್ದೆವು. ಅದು ಹಳೆಯಕಾಲದ ಮಣ್ಣಿನ ಮಾಳಿಗೆ ಮನೆ. ಆಗಿನ್ನೂ ಅಲ್ಲಿ ವಿದ್ಯುದ್ದೀಪವಿರಲಿಲ್ಲ.



ನಾನು ಏಳನೇ ಇಯತ್ತೆಯಲ್ಲಿ, ನನ್ನ ತಮ್ಮ ಮೂರನೇ ಇಯತ್ತೆಯಲ್ಲಿ ಓದುತ್ತಿದ್ದೆವು.

ಒಂದು ದಿನ ರಾತ್ರಿ ಸುಮಾರು ಎಂಟು ಗಂಟೆಯಾಗಿರಬಹುದು. ನಾವಿಬ್ಬರೂ ಕಂದೀಲದ ಬೆಳಕಿನಲ್ಲಿ ಅಭ್ಯಾಸ ಮಾಡುತ್ತ ಕುಳಿತಿದ್ದೆವು. ನಮ್ಮ ಸಾಕುನಾಯಿ 'ಮೋತಿ' ನಮ್ಮ ಎದುರಿನಲ್ಲಿ ಸ್ವಲ್ಪ ಅಂತರದಲ್ಲಿ ಕುಳಿತಿತ್ತು. ಆಗ ಒಮ್ಮೆಲೇ 'ಪಟ್ ಪಟ್' ಎಂಬ ಸಪ್ಪಳಕ್ಕೆ ನಾವು ಕಣ್ಣೆತ್ತಿ ನೋಡಿದರೆ, ಒಂದು ದೊಡ್ಡ ಕರಿ ಚೇಳು ನಮ್ಮೆಡೆಗೆ ಬರುತ್ತಲಿತ್ತು. ಅದನ್ನು ಕಂಡ ಮೋತಿ ತನ್ನ ಮುಂಗಾಲುಗಳಿಂದ ಅದರ ಮೇಲೆ ಪ್ರಹಾರ ನಡೆಸಿತ್ತು. ಆದರೂ ಚೇಳು ತಪ್ಪಿಸಿಕೊಂಡು ಪಾರಾಗಿ ಹೋಗಲು ಪ್ರಯತ್ನಿಸುತ್ತಿತ್ತು. ಪೇಟೆಗೆ ಹೋಗಿದ್ದ ಅಪ್ಪ ಬಂದಿರಲಿಲ್ಲ; ಅಮ್ಮ ಅಂತೂ ಈ ಲೋಕದಲ್ಲಿಯೇ ಇರಲಿಲ್ಲ. ಮತ್ತೆ ಮನೆಯಲ್ಲಿ ಬೇರೆ ಯಾರೂ ಇರಲಿಲ್ಲವಾದ್ದರಿಂದ ನಮಗೆ ಭಯವಾಗಿತ್ತು.ಆದರೆ ನಮ್ಮ ನೆಚ್ಚಿನ ಮೋತಿ ಛಲ ಬಿಡದೆ ಕೊನೆಗೂ ಆ ಚೇಳನ್ನು ಸಾಯಿಸಿತು. ಆಗ ನಮಗೆ ನೆಮ್ಮದಿಯಾಯಿತು. ನಾನು ಮೋತಿಯ ಮೈದಡವಿ ಚಪಾತಿ ತಿನಿಸಿದೆನು. ಅದು ನಡೆದಾಡುವಾಗ ಕುಂಯಿಗುಡುತ್ತಿತ್ತು.



ಪಾಪ! ಅದರ ಕಾಲಿಗೆ ಆ ಚೇಳು ಕುಟುಕಿತ್ತು. ಅಷ್ಟರಲ್ಲಿ ಅಪ್ಪ ಮರಳಿ ಬಂದು ನಮ್ಮೆದುರಿನಲ್ಲಿ ಸತ್ತು ಬಿದ್ದಿದ್ದ ಚೇಳು, ಕುಂಯಿಗುಡುತ್ತ ಕುಳಿತಿದ್ದ ಮೋತಿ ಎಲ್ಲವನ್ನೂ ನೋಡಿ 'ಏನು?' ಎಂದು ಕೇಳಿದರು. ನಾನು ಎಲ್ಲವನ್ನೂ ಹೇಳಿದೆ.

ಆಗ ಅವರು 'ನೋಡಿದೆಯಾ, ನಾಯಿ ಮೂಕ ಪ್ರಾಣಿಯಾದರೂ ಎಷ್ಟೊಂದು ಅದರ ಸ್ವಾಮಿನಿಷ್ಠೆ! ತಾನು ಕಷ್ಟ ಅನುಭವಿಸಿ ನಿಮಗೆ ಆಗಬಹುದಾಗಿದ್ದ ಕಷ್ಟವನ್ನು ತಪ್ಪಿಸಿತು! ಪಾಪ, ತನಗರಿವಿಲ್ಲದೆಯೇ ಪರೋಪಕಾರಾರ್ಥಂ ಇದಂ ಶರೀರಮ್ ಎಂಬ ತತ್ತ್ವವನ್ನು ಕೃತಿಯಲ್ಲಿ ತಂದು ತೋರಿಸಿತಲ್ಲವೆ?' ಈ ಆದರ್ಶದ ಬೆಳಕಿನಿಂದ ಉಜ್ವಲವಾದ ಬದುಕು ಮನುಷ್ಯನದಾದರೇನು, ನಾಯಿಯದಾದರೇನು ಅದೊಂದು ಸಾರ್ಥಕ ಬದುಕೇ!

❁ ನಾ. ವೆಂ. ದೇಶಪಾಂಡೆ